# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.926/2018

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ನಾಗರಾಜ | CW: 16 | PW: 7 |
| ತಂದೆಯ ಹೆಸರು | : | ರಾಮಪ್ಪ | | |
| ವಯಸ್ಸು | : | 49 | | |
| ವೃತ್ತಿ | : | ತಾಲ್ಲೂಕು ಪಂಚಾಯತಿ ಗ್ರಾಮ ಸಹಾಯಕರು | | |
| ವಾಸಸ್ಥಳ | : | ಹೆಚ್. ಗೋಪಗೊಂಡನಹಳ್ಳಿ | | |

ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಚಾಸಾ 17 ರವರು ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಜರುಗಿಸಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ ಆದರೆ ಅದರಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ 1 ಮತ್ತು 2 ನ್ನು ನಾನು ಈ ಹಿಂದೆ ನೋಡಿಲ್ಲ.

ಸಾಕ್ಷಿಯು ನಿಪಿ 3 ಅಮಾನತ್ತು ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ದಿಃ 28.06.2018 ರಂದು ನನ್ನ ಹಾಗೂ ಚಾಸಾ 1 ಮತ್ತು 17 ರ ಸಮಕ್ಷಮದಲ್ಲಿ ನಿಪಿ 3 ರಂತೆ ಮಧ್ಯಾಹ್ನ 2 ರಿಂದ 2.30 ರವರೆಗೆ ಅಮಾನತುತ ಪಂಚನಾಮೆಯನ್ನು ಜರುಗಿಸಿ, ಒಂದು ಖಾಕಿ ಬಣ್ಣದ ಶರ್ಟ್‌ನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ– ಆರೋಪಿಗಳ ಪರ ವಕೀಲರಿಂದಃ–

ಆರೋಪಿಗಳ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.